**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 91/2020**

**ಚಾ.ಸಾಃ 27, ಫ್ರಾ.ಸಾಃ 14**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಧರ ಎಸ್. ಆರ್. |
| ತಂದೆಯ ಹೆಸರು | ರಾಮಚಂದ್ರಮೂರ್ತಿ |
| ವಯಸ್ಸು | 43 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಗೋಕರ್ಣ ಪೋಲೀಸ್ ಠಾಣೆ |
| ವಾಸ್ತವ್ಯ | ಗೋಕರ್ಣ |

**ಸಾಕ್ಷಿಯನ್ನು ದಿನಾಂಕಃ 11-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಅಕ್ಟೋಬರ್-2020 ರಿಂದ ಜನವರಿ-2023 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **03-10-2020** ರಂದು ಚಾಸಾ-26 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ದಿನಾಂಕ 10-10-2020 ರಂದು ಚಾಸಾ-18 ರವರಿಗೆ ಪತ್ರ ಬರೆದು ಘಟನಾ ಸ್ಥಳದ ಮನೆಯ ಉತಾರು ಪೂರೈಸುವಂತೆ ಕೇಳಿಕೊಂಡಿರುತ್ತೇನೆ. ಅದರಂತೆ ಚಾಸಾ-18 ರವರು ಮಾಹಿತಿ ಪತ್ರ ಮತ್ತು ಮನೆಯ ಕರ ಆಕರಣೆ ಪತ್ರವನ್ನು ನೀಡಿದ್ದು ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಈಗ ಅವುಗಳನ್ನು ನೋಡುತ್ತಿದ್ದು ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು.

ದಿನಾಂಕ 11-10-2020 ರಂದು ಘಟನಾ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಚಾಸಾ-17 ರವರಿಗೆ ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ದಿನಾಂಕ 09-11-2020 ರಂದು ಸದರಿಯವರು ಒಂದು ಪತ್ರದ ಮೂಲಕ ನಕಾಶೆಯನ್ನು ತಯಾರಿಸಿಕೊಟ್ಟಿರುತ್ತಾರೆ. ಎಇಇ ರವರ ಪತ್ರವನ್ನು ನೋಡುತ್ತಿದ್ದು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿಪಿ-18 ಎಂದು ಗುರುತಿಸಲಾಯಿತು.

ದಿನಾಂಕ 20-10-2020 ರಂದು ಮಣಪುರಂ ಫೈನಾನ್ಸ ಕುಮಟಾ ನೆಲ್ಲಿಕೇರಿ ಶಾಖೆಯ ವ್ಯವಸ್ಥಾಪಕರಿಗೆ ಆರೋಪಿತರು ಒಡವೆ ಇಟ್ಟಿರುವ ಬಗ್ಗೆ ಮಾಹಿತಿ ನೀಡುವಂತೆ ಒಂದು ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸದರಿಯವರು ದಿನಾಂಕ 24-10-2020 ರಂದು ಒಂದು ಪತ್ರದ ಮೂಲಕ 2 ಆಧಾರ ಕಾರ್ಡ, 4 ಸಾಲದ ಅರ್ಜಿಗಳು, ಲೆಡ್ಜರ್ ಬುಕ್‌ನ 2 ಪ್ರತಿಗಳನ್ನು ಪೂರೈಸಿರುತ್ತಾರೆ. ಮಣಪುರಂ

ಫೈನಾನ್ಸನ ಲೆಟರನ್ನು ನೋಡುತ್ತಿದ್ದು ನಿಪಿ–20 ಎಂದು, 2 ಆಧಾರ ಕಾರ್ಡಗಳ ಪ್ರತಿಗಳು, ಸಾಲದ ಅರ್ಜಿಗಳು, ಲೆಡ್ಜರ್ ಬುಕ್‌ನ ಪ್ರತಿಗಳನ್ನು ನಿಪಿ–21 ರಿಂದ 27 ಎಂದು ಗುರುತಿಸಲಾಯಿತು.

ದಿನಾಂಕ 24–10–2020 ರಂದು ಮಣಪುರಂ ಫೈನಾನ್ಸ ಕುಮಟಾ ಶಾಖೆಯ ವ್ಯವಸ್ಥಾಪಕರಿಗೆ ಆರೋಪಿತರು ಒಡವೆ ಇಟ್ಟಿರುವ ಬಗ್ಗೆ ಮಾಹಿತಿ ನೀಡುವಂತೆ ಒಂದು ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ–28 ಎಂದು, ಸಾಕ್ಷಿಯ ಸಹಿಯನ್ನು ನಿಪಿ–28(ಎ) ಎಂದು ಗುರುತಿಸಲಾಯಿತು. ಮತ್ತು ಬಾಂಕಿನವರು ನೀಡಿದ ಮಾಹಿತಿಯನ್ನು ಒಟ್ಟಾರೆಯಾಗಿ (9 ಹಾಳೆಗಳನ್ನು ಒಳಗೊಂಡಿರುತ್ತದೆ) ನಿಪಿ–29 ಎಂದು ಗುರುತಿಸಲಾಯಿತು.

ನಂತರ ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ</u>**

ಪಂಚಾಯತಿಯವರು ಪೂರೈಸಿದ ಉತಾರಿನ ರೀತ್ಯಾ ಪಿರ್ಯಾದಿಯ ಗಂಡ ಮನೆಯ ಮಾಲೀಕ. ಘಟನಾ ಸ್ಥಳಕ್ಕೆ ನಾನು ವೈಯಕ್ತಿಕವಾಗಿ ಭೇಟಿ ನೀಡಿಲ್ಲ. ಮಣಪುರಂ ಶಾಖೆಯ ವ್ಯವಸ್ಥಾಪಕರ ಹೇಳಿಕೆಯನ್ನು ನಾನು ಪ್ರತ್ಯೇಕವಾಗಿ ತೆಗೆದುಕೊಂಡಿಲ್ಲ.

ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮಣಪುರಂ ಫೈನಾನ್ಸನವರು ಹಾಜರುಪಡಿಸಿದ ದಾಖಲೆಗಳು ಆರೋಪಿಗಳಿಗೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲಾಗಿದ್ದ 10 ರಿಂದ 12 ಪ್ರಕರಣಗಳನ್ನು ಮುಕ್ತಾಯ ಮಾಡಬೇಕು ಎಂದು ಮೇಲಾಧಿಕಾರಿಗಳು ಸೂಚಿಸಿದ ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**